ಕರ್ನಾಟಕ ಸರಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಉಪಸ್ಥಿತರು:-

ವೆಂಕನಗೌಡ ಆರ್ ಪಾಟೀಲ್ , ತಹಶೀಲ್ದಾರರು ಹೂವಿನಹಡಗಲಿ.

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| 1) ಶ್ರೀಮತಿ ಅನ್ನಪೂರ್ಣಮ್ಮ ಗಂಡ ಕೊಟ್ರಬಸಯ್ಯ (ಸ್ವಾತಂತ್ರ್ಯ ಹೋರಾಟಗಾರರು) ಕೊಟ್ಟೂರು (ಪೋ) ಅಗಡೇರ ಓಣಿ, ಬಸವಣ್ಣ ಗುಡಿ ಹತ್ತಿರ ಕೂಡ್ಲಿಗ್ಗಿ (ತಾ) Phone 8970176770 (ಪಿ ಜಗದೀಶ ಗೌಡ, ವಕೀಲರು, ಹೂವಿನಡಹಗಲಿ)<br>2)ಎಸ್ ಎಂ ರತ್ನಮ್ಮ ಗಂಡ ಲೇಟ್ ಕೋಟ್ರಯ್ಯ ಯಡಿಯಳ್ಳಿ (ಪೋ) ಹರಪನಹಳ್ಳಿ (ತಾ) | 1)ಎಸ್ ಎಂ ಬಸವಲಿಂಗಯ್ಯ ತಂದೆ ಲೇಟ್ ಕೋಟ್ರಯ್ಯ<br>2)ಎಸ್ ಎಂ ಮಂಜಯ್ಯತಂದೆ ಲೇಟ್ ಕೋಟ್ರಯ್ಯ<br>3)ಎಸ್ ಎಂ ನಾಗರಾಜ ತಂದೆ ಲೇಟ್ ಕೋಟ್ರಯ್ಯ<br>ಕೊಟ್ಟೂರು (ಪೋ) |

<u>ದಾವಾ ಜಮೀನಿನ ವಿವರ</u>

| ಗ್ರಾಮ | ಸರ್ವೇ ನಂಬರ | ವಿಸ್ತೀರ್ಣ(ಎಕರೆ.ಸೆಂಟ್ಸ್) |
|---|---|---|
| ಮಾಗಳ | 611 ಎಫ್ | 4.00 |

ಪ್ರಸ್ತಾವನೆ:-

ಮೇಲಿನ ದಾವಾ ಜಮೀನನ್ನು ವಾದಿಯು ಕ್ರಯ ಪತ್ರ ಸಂಖ್ಯೆ 3791/2015-16 ದಿನಾಂಕ 11/01/2016 ರಂತೆ ಎಸ್ ಎಂ ರತ್ನಮ್ಮ ಗಂಡ ಲೇಟ್ ಕೋಟ್ರಯ್ಯ ಯಡಿಯಳ್ಳಿ ರವರಿಂದ ಕ್ರಯಕ್ಕೆ ಪಡೆದಿರುತ್ತಾರೆ. ಈ ಹಿನ್ನಲೆಯಲ್ಲಿ ನೊಂದಣಿ ಜೆ ನಮೂನೆ ಪ್ರಕಾರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಾಲ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾಮ ಲೆಕ್ಕಾದಿಕಾರಿಗಳು ಹಡಗಲಿ ರವರು ನಮೂನೆ 21ನ್ನು ಜಾರಿಮಾಡಿದಾಗ ದಿನಾಂಕ 10/02/2016 ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿ ರವರು ಹಕ್ಕು ಬದಲಾವಣೆ ಹೆಚ್ 51/2015-16 ದಿನಾಂಕ 12/01/2016ರ ಪ್ರಕಾರ ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಕರ್ನಾಟಕ ಭೂ ಕಂದಾಯ ಕಾಯ್ದು 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಹಾಗೂ ಪ್ರತಿವಾದಿಗಳಗೆ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 26/05/2016 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಗಿ ದಿನಾಂಕ 06/10/2016ರ ವರೆಗೆ ವಿಚಾರಣೆ ನಡೆಸಲಾಗಿತ್ತು.

ವಾದಿಯಾದ ಎಸ್ ಎಂ ರತ್ನಮ್ಮ ಗಂಡ ಲೇಟ್ ಕೋಟ್ರಯ್ಯ ಯಡಿಯಳ್ಳಿ (ಪೋ) ರವರು ಮಾಗಳ ಗ್ರಾಮದ ಸರ್ವೇ ನಂಬರ 611 ಎಫ್ (ವಿ) 4.00 ಎಕರೆ ಜಮೀನನ್ನು ಶ್ರೀಮತಿ ಅನ್ನಪೂರ್ಣಮ್ಮ ಗಂಡ ಕೊಟ್ರಬಸಯ್ಯ (ಸ್ವಾತಂತ್ರ್ಯ ಹೋರಾಟಗಾರರು) ಕೊಟ್ಟೂರು (ಪೋ) ಅಗಡೇರ ಓಣಿ, ಬಸವಣ್ಣ ಗುಡಿ ಹತ್ತಿರ ಕೂಡ್ಲಿಗ್ಗಿ (ತಾ)ರವರಿಂದ ಉಪನೊಂದಾಣಾಧಿಕಾರಿಗಳ ಹಡಗಲಿ ರವರಲ್ಲಿ ನೊಂದಣಿ ದಸ್ತಾವೇಜು ಸಂಖ್ಯೆ 3791/2015-16 ದಿನಾಂಕ 11/01/2016 ರಲ್ಲಿ ಖರೀದಿ ಕ್ರಯಕ್ಕೆ ಪಡೆದಿರುತ್ತೇನೆ, ಎಂದು ತಿಳಿಸಿ ಅದರಂತೆ ತನ್ನ ಹೆಸರಿಗೆ ಪಹಣಿಯಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿ ತಮ್ಮ ವಾದವನ್ನು ತಿಳಿಸಿರುತ್ತಾರೆ

ಮತ್ತು ಹಿರಿಯರು ಮಾಡಿರುವ ಆಸ್ತಿ ಬೇಕಾಗಿದೆ ಎಂದು ಹಾಗೂ ಕ್ರಯ ಪತ್ರ ರದ್ದು ಮಾಡಬೇಕೆಂದು ಅರ್ಜಿದಾರರು ಹೆಸರಿಗೆ ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಬಾರದೆಂದು ಕೋರಿ ಲಿಖಿತ ತಕರಾರು ಸಲ್ಲಿಸಿರುತ್ತಾರೆ.

ವಾದಿಗಳಾದ ಶ್ರೀಮತಿ ಅನ್ನಪೂರ್ಣಮ್ಮ ಗಂಡ ಕೊಟ್ರಬಸಯ್ಯ ರವರು ಮಾಗಳ ಗ್ರಾಮದ ಸರ್ವೇ ನಂಬರ 611 ಎಫ್ (ವಿ) 4.00 ಎಕರೆ ಜಮೀನನ್ನು ಎಸ್ ಎಂ ರತ್ನಮ್ಮ ಗಂಡ ಲೇಟ್ ಕೋಟ್ರಯ್ಯ ಯಡಿಯಳ್ಳಿ ಹೆಸರಿಗೆ ಪಹಣಿ ಪಟ್ಟಾ ಇದ್ದು ಕಾನೂನಿನ ಪ್ರಕಾರ ನೊಂದಣಿ ಸಂಖ್ಯೆ 3791/2015-16 ದಿನಾಂಕ 11/01/2016ರಂದು ಉಪನೊಂದಣಿ ಕಛೇರಿ ಹಡಗಲಿಯಲ್ಲಿ ರೂ 3.60.000/- ಗಳಿಗೆ ಖರೀದಿ ಮಾಡಿ ನೊಂದಣಿ ಮಾಡಿಸಿಕೊಂಡಿರುತ್ತೇನೆ ನೊಂದಣಿ ಖರೀದಿ ಪತ್ರ ಪ್ರಕಾರ ತಕರಾರುದಾರ ಆಕ್ಷೇಪಣೆಯನ್ನು ತಿರಸ್ಕರಿಸಿ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಕೋರಿ ವಾದ ಮಂಡಿಸಿರುತ್ತಾರೆ.

ಈ ಪ್ರಕರಣದಲ್ಲಿ ವಾದಿಗಳ/ಪ್ರತಿವಾದಿಗಳ ಹಾಗೂ ಅವರ ಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಭೂ ಕಂದಾಯ ಕಾಯ್ದೆ ಅನ್ವಯ 1964 ಕಾಲಂ 128 ರನ್ವಯ ನೊಂದಣಿ ಕ್ರಯ ಪತ್ರದ ಪ್ರಕಾರ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕಂದಾಯ ಅಧಿಕಾರಿಗಳ ಆದ್ಯ ಕರ್ತವ್ಯವಾಗಿರುತ್ತದೆ. ಕ್ರಯ ಪತ್ರವನ್ನು ರದ್ದು ಪಡಿಸಲು ಅಧಿಕಾರ ಕಂದಾಯ ನ್ಯಾಯಾಲಯಗಳಿಗೆ ಇರದೆ ಇರುವುದಿರಿಂದ ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಆದೇಶ.

**ಸಂ/ಕಂ/ಪಹಣಿ/ವಿವಾದ/30/2015-16** **ದಿನಾಂಕ 20/10/2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ ಹಿನ್ನೆಲೆ ಕಾರಣಗಳಿಂದಾಗಿ ನೊಂದಣಿ ಕ್ರಯಪತ್ರ ಸಂಖ್ಯೆ 3791/2015-16 ದಿನಾಂಕ 11/01/2016 ಪ್ರಕಾರ ವಾದಿಯಾದ ಶ್ರೀಮತಿ ಅನ್ನಪೂರ್ಣಮ್ಮ ಗಂಡ ಕೊಟ್ರಬಸಯ್ಯ ರವರ ಹೆಸರಿಗೆ ಮಾಗಳ ಗ್ರಾಮದ ಸರ್ವೇ ನಂಬರ 611 ಎಫ್ (ವಿ) 4.00 ಎಕರೆ ಜಮೀನನ್ನು ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚು ಮಾಡಿಸಿ, ದಿನಾಂಕ 20/10/2016 ಬಹಿರಂಗ ನ್ಯಾಯಲದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ಹೂವಿನಹಡಗಲಿ.

ಪ್ರತಿಗಳನ್ನು;

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.
2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.